ಮೃತ ಪಟ್ಟವರ ಹೆಸರು :

ಮೃತ ದಿನಾಂಕ :

ಮೃತ ತಿಥಿ / ತೇದಿ :

ಮಾಸಿಕಗಳು				
ಮಾಸಿಕ	ದಿನಗಳು	ಸಂಕೇತ	ದಿನಾಂಕ	ವಾರ
1ನೇ ಮಾಸಿಕ	**21**ನೇ ದಿನ	**ಆದ್ಯ ಮಾಸಿಕ**		
02 ನೇ	**27**ನೇ ದಿನ ಮಾಸೂನ	**ದ್ವಿತೀಯ**		
03 ನೇ	**30**ನೇ ದಿನ ಮೃತತಿಥಿ	**ತೃತೀಯ**		
04ನೇ	**1** ½ ತಿಂಗಳು (41-45 ದಿನ) ತ್ರೈಪಕ್ಷಿಕಾ	**ಸಾರ್ಧಮಾಸಿಕ**		
05ನೇ	**60**ನೇ ದಿನ 2ನೇ ಮಾಸ ಮೃತತಿಥಿ	**ಪಂಚಮ**		
06ನೇ	**90**ನೇ ದಿನ 3ನೇ ಮಾಸ ಮೃತತಿಥಿ	**ಷಷ್ಠ**		
07ನೇ	**120**ನೇ ದಿನ 4ನೇ ಮಾಸ ಮೃತತಿಥಿ	**ಸಪ್ತಮ**		
08ನೇ	**150**ನೇ ದಿನ 5ನೇ ಮಾಸ ಮೃತತಿಥಿ	**ಅಷ್ಟಮ**		
09ನೇ	**5** ½ ತಿಂಗಳು (171-175 ದಿನ) ದ್ವಾದಶಪಾಕ್ಷಿಕ	**ಊನಶಾಣ್ಮಾಸ**		
10ನೇ	**180**ನೇ ದಿನ 6ನೇ ಮಾಸ ಮೃತತಿಥಿ	**ದಶಮ**		
11ನೇ	**210**ನೇ ದಿನ 7ನೇ ಮಾಸ ಮೃತತಿಥಿ	**ಏಕಾದಶ**		
12ನೇ	**240**ನೇ ದಿನ 8ನೇ ಮಾಸ ಮೃತತಿಥಿ	**ದ್ವಾದಶ**		
13ನೇ	**270**ನೇ ದಿನ 9ನೇ ಮಾಸ ಮೃತತಿಥಿ	**ತ್ರಯೋದಶ**		
14ನೇ	**300**ನೇ ದಿನ 10ನೇ ಮಾಸ ಮೃತತಿಥಿ	**ಚತುರ್ದಶ**		
15ನೇ	**330**ನೇ ದಿನ 11ನೇ ಮಾಸ	**ಪಂಚದಶ**		
16ನೇ	**11**½ತಿಂಗಳು (346- 350 ದಿನ) ಊನಾಬ್ದಿಕ	**ಷೋಡಶ**		

ಪ್ರಥಮಾಬ್ದಿಕ (ಮೃತದಿನ)

ಪಿತೃಸಂಗಮ (ಪತಂಗ)

ಊನ ಮಾಸಿಕಗಳ ವಿಚಾರ

೧೬ ಮಾಸಿಕಗಳಲ್ಲಿ ೧೨ ಮಾಸಿಕಗಳು ಆಯಾ ಮೃತ ತಿಥಿಯಲ್ಲಿ ನೆರವೇರುತ್ತದೆ. ಉಳಿದ ನಾಲ್ಕು ಮಾಸಿಕಗಳನ್ನು ಊನ ಮಾಸಿಕಗಳು ಎನ್ನುತ್ತಾರೆ. ಅವುಗಳನ್ನು ಪುನಃ ಮಾಸೋನ, ತ್ರೈಪಾಕ್ಷಿಕ, ಊನಷಾಣ್ಮಾಸಿಕ ಮತ್ತು ಊನಾಬ್ದಿಕಗಳಾಗಿ ಪ್ರತ್ಯೇಕಿಸಿದ್ದಾರೆ. ಮಾಸೋನಕ್ಕೆ ಏಕದ್ವಿತ್ರಿದಿನಗಳಿಂದ ಊನತ್ವವನ್ನು ಹೇಳಿದ್ದಾರೆ. ಏಕೋನ ಪಕ್ಷದಲ್ಲಿ ೨೮ನೇ ದಿನದಲ್ಲೂ, ದ್ವಿದಿನೋನ ಪಕ್ಷದಲ್ಲಿ ೨೭ನೇ ದಿನದಲ್ಲೂ, ತ್ರಿದಿನೋನ ಪಕ್ಷದಲ್ಲಿ ೨೬ನೇ ದಿನದಲ್ಲೂ ಮಾಸಿಕವನ್ನು ಮಾಡುತ್ತಾರೆ. ಇನ್ನುಳಿದಂತೆ ಮೂರು ಊನ ಮಾಸಿಕಗಳನ್ನು ತ್ರಿಭಾಗೋನ ಕ್ರಮದಲ್ಲಿ ನಿರ್ಣಯಿಸಿದ್ದಾರೆ. ೧೫ ದಿನಗಳ ಪಕ್ಷ ಮಿತಿಯೊಳಗೆ ಐದೈದು ದಿನಗಳ ಭಾಗ ಮಾಡಿ, ಆ ಮೂರು ಭಾಗಗಳಲ್ಲಿ ಕೊನೆಯ ಭಾಗದ ದಿನಗಳಲ್ಲಿ ತ್ರೈಪಾಕ್ಷಿಕವನ್ನೂ, ಮಧ್ಯಭಾಗದ ದಿನಗಳಲ್ಲಿ ಊನಷಾಣ್ಮಾಸವನ್ನೂ ಮತ್ತು ಮೊದಲಿನ ಐದು ದಿನಗಳ ವಿಭಾಗದಲ್ಲಿ ಊನಾಬ್ದಿಕವನ್ನೂ ಆಚರಿಸುತ್ತಾರೆ. ಇನ್ನು ಕೆಲವರು ತ್ರೈಪಾಕ್ಷಿಕ, ಊನಷಾಣ್ಮಾಸಿಕ ಮತ್ತು ಊನಾಬ್ದಿಕಗಳನ್ನು ಮೃತ ತಿಥಿಯ ಹಿಂದಿನ ದಿನದಲ್ಲೇ ಆಚರಿಸಬೇಕೆಂದು ಹೇಳುತ್ತಾರೆ.

ಊನವರ್ಜ್ಯಗಳ ವಿಷಯದಲ್ಲಿ ಅಭಿಪ್ರಾಯಭೇದಗಳು.

1. ಆಶೌಚಾದಿ ಪ್ರಾಪ್ತಿಯಲ್ಲಿ ಮಾತ್ರ ವರ್ಜ್ಯಾವರ್ಜ್ಯದಿನ ಚಿಂತನೆ ಮಾಡಬೇಕು.
2. ಮೃತತಿಥಿಯ ಹಿಂದಿನ ದಿನ ಊನಮಾಸಿಕ ಆಚರಿಸುವ ಪಕ್ಷದಲ್ಲಿ ಯಾವುದೇ ದಿನದ ಆಯ್ಕೆಯ ಪ್ರಸಂಗವಿಲ್ಲ.
3. "ಕವಿಃ ಕಥಯ ತನ್ವಂಗಿ ಪತಂಗಃ ಪಿತೃಸಂಗಮಃ" ಎಂಬಲ್ಲಿನ ಆಯಾ ದಿನ ಸಂಖ್ಯೆಗೆ ಒತ್ತು ನೀಡಿದಾಗ ಮತ್ತೆ ವರ್ಜ್ಯದಿನಗಳ ವಿವೇಚನೆಯ ಅಗತ್ಯವಿಲ್ಲ!
4. ತ್ರಿಭಾಗೋನ ಪಕ್ಷದಲ್ಲಿ ಐದು ದಿನಗಳಲ್ಲಿ ಒಂದನ್ನು ಆಯ್ಕೆ ಮಾಡಲು ಈ ವರ್ಜ್ಯ-ಅವರ್ಜ್ಯ ಯಾದಿಯನ್ನು ಅನುಸರಿಸುವುದು.

ಊನಮಾಸಿಕಕ್ಕೆ ವರ್ಜ್ಯಾವರ್ಜ್ಯ ದಿನಗಳು

ತ್ರಿಪುಷ್ಕರೇಷು ನಂದಾಸು ಸಿನೀವಾಲ್ಯಾಂ ಭೃಗೋರ್ದಿನೇ |
ಚತುರ್ದಶ್ಯಾಂ ಚ ನೋನಾನಿ ಕೃತ್ತಿಕಾಸು ದ್ವಿಪುಷ್ಕರೇ ||

I. ತ್ರಿಪಾನ್ನಕ್ಷತ್ರಗಳು – ಕೃತ್ತಿಕಾ, ಪುನರ್ವಸು, ಉತ್ತರಾ, ವಿಶಾಖಾ, ಉತ್ತರಾಷಾಢಾ ಮತ್ತು ಪೂರ್ವಾಭದ್ರಾ.
ವಾರಗಳು – ರವಿ, ಮಂಗಳ ಮತ್ತು ಶನಿವಾರಗಳು.
ತಿಥಿಗಳು – ಬಿದಿಗೆ, ಸಪ್ತಮೀ ಮತ್ತು ದ್ವಾದಶಿಗಳು. ಹೀಗೆ ಈ ಮೂರರಲ್ಲಿ ಯಾವುದೇ ಎರಡು ಸೇರಿದರೆ ದ್ವಿಪುಷ್ಕರವು, ಮೂರೂ ಸೇರಿದರೆ ತ್ರಿಪುಷ್ಕರವು. ಇಲ್ಲಿ ತ್ರಿಪಾನ್ನಕ್ಷತ್ರಗಳಿಂದ ಕೂಡಿದ ದ್ವಿಪುಷ್ಕರ ಮತ್ತು ತ್ರಿಪುಷ್ಕರಗಳೆಂಬ ಸಂಯುಕ್ತ ದಿನಗಳು ವರ್ಜ್ಯಗಳು.

II. ನಂದಾ ತಿಥಿಗಳಾದ ಪ್ರಥಮಾ, ಷಷ್ಠೀ, ಏಕಾದಶಿಗಳು ಉಳಿದ ಚತುರ್ದಶೀ ಮತ್ತು ಅಮಾವಾಸ್ಯೆಗಳು ಸಂಪೂರ್ಣ ವರ್ಜ್ಯವಾಗಿವೆ.

III. ಶುಕ್ರವಾರವೂ ಕೂಡ ವರ್ಜ್ಯವೆನಿಸಿದೆ. ❧